# ರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾಂ: ಒಂದು ಪರಿಚಯ

**ಸ್ವಾ**ಮಿ ವಿವೇಕಾನಂದರು ತಮ್ಮ ಪರಿವ್ರಾಜಕ ದಿನಗಳಲ್ಲಿ ಮಧ್ಯಪ್ರದೇಶ, ಗುಜರಾತ್, ರಾಜಾಸ್ಥಾನ, ಮಹಾರಾಷ್ಟ್ರಗಳ ಹಲವಾರು ಸ್ಥಳಗಳಿಗೆ ಭೇಟಿಯಿತ್ತು, ೧೮೯೨ರ ಅಕ್ಟೋಬರ್ ೧೫ರಂದು ಬೆಳಗಾವಿಯಲ್ಲಿ ಕಾಲಿರಿಸಿದರು. ಈ ಮುಂಚೆ ಕೊಲ್ಹಾಪುರದಲ್ಲಿ ಕೆಲದಿನಗಳನ್ನು ಕಳೆದು, ದಕ್ಷಿಣ ಭಾರತದತ್ತ ಹೊರಟಿದ್ದ ಸ್ವಾಮೀಜಿಯವರಿಗೆ ಕೊಲ್ಹಾಪುರದ ರಾಜನ ಆಪ್ತ ಕಾರ್ಯದರ್ಶಿಯು ಬೆಳಗಾವಿಯ ಶ್ರೀಯುತ ಭಾಟೆ ಎಂಬವರಿಗೆ ಪರಿಚಯ ಪತ್ರವನ್ನು ಕೊಟ್ಟಿದ್ದರು. ಹೀಗಾಗಿ ಬೆಳಗಾವಿಗೆ ಬಂದಾಗ ಮೊದಲು ತಂಗಿದ್ದು ಶ್ರೀಯುತ ಭಾಟೆ ಎಂಬವರಲ್ಲಿ. ಒಂದು ದಿನ ಭಾಟೆಯವರು ಸ್ವಾಮೀಜಿಯವರನ್ನು ತಮ್ಮ ಸ್ನೇಹಿತರಾದ ಹರಿಪದ ಮಿತ್ರ ಎಂಬವರ ಮನೆಗೆ ಕರೆದುಕೊಂಡು ಹೋಗಿ ಅವರಿಗೆ ಪರಿಚಯ ಮಾಡಿಸಿದರು. ಈತ ಅಲ್ಲಿನ ಅರಣ್ಯಾಧಿಕಾರಿ; ಒಳ್ಳೇ ವಿದ್ಯಾವಂತ, ಬುದ್ಧಿವಂತ. ಆದರೆ ದೇವರು, ಧರ್ಮ ಇವುಗಳಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಎಲ್ಲ ಸಾಧು ಸಂನ್ಯಾಸಿಗಳನ್ನೂ ಮೋಸಗಾರರು ಎಂಬ ದೃಷ್ಟಿಯಿಂದಲೇ ನೋಡುತ್ತಿದ್ದರು. ಆದರೆ ಸ್ವಾಮೀಜಿಯವರನ್ನು ನೋಡಿದಾಗ ತಮಗರಿವಿಲ್ಲದಂತೆಯೇ ಅವರಿಂದ ಆಕರ್ಷಿತರಾದರು. ಸ್ವಾಮೀಜಿಯವರು ಬೆಳಗಾವಿಯಲ್ಲಿ ತಂಗಿದ್ದಾಗಿನ ಅಪೂರ್ವ ದಿವ್ಯಸ್ಮೃತಿಗಳೆಲ್ಲ ಹರಿಪದ ಮಿತ್ರರ ಮನೆಯೊಂದಿಗೆ ತಳಕು ಹಾಕಿಕೊಂಡಿವೆ.

ಹರಿಪದ ಮಿತ್ರರ ಮನೆಯವರೆಲ್ಲ ಸ್ವಾಮೀಜಿಯವರಿಗೆ ತೀರಾ ಆತ್ಮೀಯರಾದರು. ಅವರೊಡನೆ ಮನಬಿಚ್ಚಿ ತಮ್ಮ ಪರಿವ್ರಾಜಕ ಜೀವನದ ರೋಮಾಂಚಕಾರೀ ಅನುಭವಗಳನ್ನೆಲ್ಲ ಸ್ವಾಮೀಜಿ ಬಣ್ಣಿಸುತ್ತಿದ್ದರು. ಸ್ವಾಮೀಜಿಯವರು ಎರಡು ದಿನಗಳು ಅವರಲ್ಲಿ ತಂಗಿದ್ದು, ಅನಂತರ ಹೊರಡಲನುವಾದಾಗ ಹರಿಪದ ಮಿತ್ರರು ಬಡಪೆಟ್ಟಿಗೆ ಒಪ್ಪಲಿಲ್ಲ. ಕೊನೆಗೆ ಅವರ ಒತ್ತಾಯದ ಮೇರೆಗೆ ಮತ್ತೂ ಕೆಲವು ದಿನಗಳು ಇರಬೇಕಾಯಿತು. ಸ್ವಾಮೀಜಿಯವರು ಅವರ ಮನೆಯಲ್ಲಿ ಒಂಬತ್ತು ದಿನ ತಂಗಿದ್ದರೆಂದು ಹರಿಪದ ಮಿತ್ರ ತಿಳಿಸುತ್ತಾರೆ. ಆ ಒಂಬತ್ತು ದಿನಗಳು ಆತನಿಗಷ್ಟೇ ಅಲ್ಲ, ಬೆಳಗಾವಿಯ ಇತಿಹಾಸದಲ್ಲೇ ನವರಾತ್ರಿಯಷ್ಟು ಪರ್ವದಿನದ ಮಹತ್ವವನ್ನು ಪಡೆದ ದಿನಗಳಾಗಿದ್ದವು.

**ತೀರ್ಥೀ ಕುರ್ವಂತಿ ತೀರ್ಥಾನಿ** ಎಂಬಂತೆ ಹರಿಪದಮಿತ್ರರ ಮನೆಯನ್ನು ತಮ್ಮ ಸಾನ್ನಿಧ್ಯದಿಂದ ಸ್ವಾಮೀಜಿಯವರು ಪಾವನವಾಗಿಸಿದ್ದರು. ಹೀಗಾಗಿ ಸುಮಾರು ದಶಕಗಳಿಂದ ರಾಮಕೃಷ್ಣ ಮಿಷನ್ನಿನ ಸನ್ಯಾಸಿಗಳಿಗೆಲ್ಲ ಈ ಮನೆಯ ಮೇಲೆ ವಿಶೇಷವಾದ ಅನುರಾಗ. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖೆಗಳೆಲ್ಲ ಕರ್ನಾಟಕದ ದಕ್ಷಿಣ ಭಾಗದಲ್ಲೇ ಇದ್ದು ಉತ್ತರ ಭಾಗದಲ್ಲಿ



ಒಂದೂ ಶಾಖೆ ಇಲ್ಲದಿರುವ ದೊಡ್ಡ ಕೊರತೆ ಆ ಭಾಗದ ಜನತೆಯನ್ನು ಕಾಡುತ್ತಲೇ ಇತ್ತು. ಅಲ್ಲಿ ಒಂದು ಶಾಖೆ ಪ್ರಾರಂಭಿಸಬೇಕೆಂದು, ಬೇಕಾದ ಸ್ಥಳ, ಸೌಕರ್ಯಗಳನ್ನೆಲ್ಲ ಒದಗಿಸುವುದಾಗಿ ಆ ಪ್ರಾಂತದ ಜನ ರಾಮಕೃಷ್ಣ ಮಠದ ಹಿರಿಯ ಸನ್ಯಾಸಿಗಳನ್ನು ಒತ್ತಾಯಿಸುತ್ತಲೇ ಇದ್ದರು. ಆದರೆ ಮೊದಲಿನಿಂದಲೂ ಸ್ವಾಮಿ ವಿವೇಕಾನಂದರು ಪಾವನಗೊಳಿಸಿದ ಗೃಹದ ಮೇಲೆಯೇ ಆಸಕ್ತಿ ತಾಳಿದ್ದ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಆಡಳಿತ ಮಂಡಳಿಯು ಸ್ವಾಮೀಜಿಯವರು ತಂಗಿದ್ದ ಅರಣ್ಯಾಧಿಕಾರಿಯಾಗಿದ್ದ ಹರಿಪದ ಮಿತ್ರರ ಮನೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಸಾಧ್ಯತೆಯ ಬಗ್ಗೆಯೇ ಆಲೋಚಿಸುತ್ತಿತ್ತು. ಅದೂ ಅಲ್ಲದೆ ಸ್ವಾಮೀಜಿಯವರ ಪದಾರ್ಪಣೆಯಿಂದ ಐತಿಹಾಸಿಕ ಮಹತ್ವವನ್ನು ಪಡೆದ ಆ ಸ್ಥಳವನ್ನು ಸಂರಕ್ಷಿಸಿದಂತೆಯೂ ಆಗುತ್ತದೆ ಎಂಬುದು ಮಿಷನ್ನಿನ ಆಡಳಿತ ಮಂಡಲಿಯ ಅಭಿಮತವಾಗಿತ್ತು. ಅದರಂತೆ ೧೯೬೮ರ ಸುಮಾರಿನಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಮಹಾಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ರಾಮಕೃಷ್ಣ ಮಿಷನ್ನಿನ ಬಹುಕಾಲದ ಭಕ್ತರಾದ ಶ್ರೀ ಎಂ.ಎಸ್.ನಂಜುಂಡಯ್ಯ ಅವರಿಗೆ ಸ್ವಾಮಿ ವಿವೇಕಾನಂದರ ಬೆಳಗಾವಿ ಭೇಟಿಯ ಬಗ್ಗೆ ಪ್ರಸ್ತಾಪಿಸಿ ಅವರು ಈ ಬಗ್ಗೆ ಆಸಕ್ತಿ ವಹಿಸಬೇಕೆಂದು ತಿಳಿಸಿದರು. ಅಮೆರಿಕಾದಿಂದ ಸ್ವಾಮಿ

ವಿವೇಕಾನಂದರು ಹರಿಪದ ಮಿತ್ರರ ಬೆಳಗಾವಿಯ ವಿಳಾಸಕ್ಕೆ ಪತ್ರ ಬರೆದಿದ್ದುದೂ ಹಾಗೂ ವಿವೇಕಾನಂದರನ್ನು ಕುರಿತ ಸ್ಮೃತಿಚಿತ್ರ ಲೇಖನದಲ್ಲಿ ಹರಿಪದ ಮಿತ್ರರು ಇದನ್ನು ದಾಖಲಿಸಿರುವುದೂ ತಿಳಿದಿತ್ತಾದರೂ ಬೆಳಗಾವಿಯ **ಯಾವ ಮನೆಗೆ** ಆ ಪತ್ರ ಬಂದಿತ್ತು, ಆ ಮನೆ ಬೆಳಗಾವಿಯ **ಯಾವ ಭಾಗದಲ್ಲಿದೆ** ಎಂಬುದು ತಿಳಿದುಬಂದಿರಲಿಲ್ಲ.

ತಾಳ್ಮೆಗೆ, ಶಿಸ್ತುಬದ್ಧ ಸಂಶೋಧನೆಗೆ ಹೆಸರಾದ ಶ್ರೀ ನಂಜುಂಡಯ್ಯ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದವರು, ಈಗ ನಿವೃತ್ತರಾಗಿದ್ದಾರೆ. ಸರ್ಕಾರದ ಆಡಳಿತ ವಲಯದಲ್ಲಿದ್ದ ತಮ್ಮ ಸಂಪರ್ಕಗಳ ಸಹಾಯದಿಂದ ಬೆಳಗಾವಿಯ ಭೂದಾಖಲೆಗಳನ್ನು ಪರಿಶ್ರಮವಹಿಸಿ ಜಾಲಾಡಿದರು. ಕೊನೆಗೆ, ಸರ್ವೆ ನಂ. ೩೫೭, ಮಾನ್‌ಸಿಂಗ್ ಥಾಪಾ ರಸ್ತೆ, ಅಂಚೆ ಕಛೇರಿ ಹಿಂಭಾಗ, ಕೋಟೆ, ಬೆಳಗಾಂ ೫೯೦ ೦೧೬, ಈ ವಿಳಾಸದ ನಿವಾಸವೇ ಹರಿಪದ ಮಿತ್ರರ ಮನೆಯೆಂದೂ ಸ್ವಾಮಿ ವಿವೇಕಾನಂದರು ೯ ದಿನ ತಂಗಿ ಈ ಮನೆಯನ್ನೇ ಪವಿತ್ರಗೊಳಿಸಿದ್ದುದು ಎಂಬುದೂ ಖಚಿತವಾಯಿತು.

ಆದರೆ ಆ ವಿಳಾಸದ ಕಟ್ಟಡ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ ವಸತಿಗೃಹವಾಗಿ ಪರಿವರ್ತಿತಗೊಂಡು, ಹಾಗೆಯೇ ಮುಂದುವರೆದುಕೊಂಡು ಬಂದಿತ್ತು. ಆ ಕಟ್ಟಡ ಮತ್ತು ಸುತ್ತಮುತ್ತಲಿನ ಸಣ್ಣ ಪ್ರದೇಶವನ್ನು, ಅದು ಸ್ವಾಮಿ ವಿವೇಕಾನಂದರೊಡನೆ ಹೊಂದಿರುವ ಪವಿತ್ರ ಸಂಬಂಧದ ಕಾರಣ, ರಾಮಕೃಷ್ಣ ಮಿಷನ್‌ಗೆ ವಹಿಸಿಕೊಡಬೇಕೆಂದು ೧೯೯೯ರಲ್ಲಿ ಸರ್ಕಾರಕ್ಕೆ ಅಧಿಕೃತ ಮನವಿ ಸಲ್ಲಿಸಲಾಯಿತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಯುತ ಎಸ್. ಎಂ. ಕೃಷ್ಣ ಅವರ ಮುಖ್ಯ ಕಾರ್ಯದರ್ಶಿಗಳಾಗಿದ್ದ ಶ್ರೀ ಎಸ್.ವಿ. ರಂಗನಾಥ್ ಅವರು ಬೆಳಗಾವಿಗೆ ೧೯೯೯ರ ಡಿಸೆಂಬರ್ ೧೯ರಂದು ಭೇಟಿ ನೀಡಿ ನಿವೇಶನದ ಮತ್ತು ಕಟ್ಟಡದ ಸ್ಥಳ ಪರಿಶೀಲನೆ ಮಾಡಿ ಅದರ ಪೂರ್ವಚರಿತ್ರೆಯನ್ನು ಮತ್ತೊಮ್ಮೆ ದೃಢೀಕರಿಸಿ, ಅದನ್ನು ರಾಮಕೃಷ್ಣ ಮಿಷನ್‌ಗೆ ವಹಿಸಿಕೊಡಬಹುದೆಂದು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಏಪ್ರಿಲ್ ೨೦೦೦ದಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮದ ಸಮಾರಂಭವೊಂದರಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪರಮಾಧ್ಯಕ್ಷರಾದ ಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ನಿವೇಶನ ಮತ್ತು ಕಟ್ಟಡವನ್ನು ರಾಮಕೃಷ್ಣ ಮಿಷನ್‌ಗೆ ನೀಡಬೇಕೆಂಬ ಅರ್ಜಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು. ಮೇ ೨೦೦೦ದಲ್ಲಿ ಸರ್ಕಾರ ಅರ್ಜಿಯನ್ನು ಮಾನ್ಯ ಮಾಡಿ ಆ ಕಟ್ಟಡವನ್ನು ರಾಮಕೃಷ್ಣ ಮಿಷನ್‌ಗೆ ನೀಡಿದ ಆದೇಶವೊಂದನ್ನು ಹೊರಡಿಸಿತು.

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಪ್ರಧಾನ ಕೇಂದ್ರವಾದ ಪಶ್ಚಿಮ ಬಂಗಾಳದ ಬೇಲೂರು ಮಠದಲ್ಲಿನ ಆಡಳಿತ ಮಂಡಳಿ ಈ ನಿವೇಶನ ಮತ್ತು ಜಮೀನನ್ನು ವಹಿಸಿಕೊಳ್ಳಲು, ಆಗ ಪೊನ್ನಂಪೇಟೆಯ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಪುರುಷೋತ್ತಮಾನಂದಜಿಯವರನ್ನು ನೇಮಕ ಮಾಡಿತು. ಅದರಂತೆ ಅವರು ೨೦೦೦ದ ಜೂನ್ ೧ ರಂದು ಅದರ ಉಸ್ತುವಾರಿಯನ್ನು ವಹಿಸಿಕೊಂಡರು. ಅಂದು ಪವಿತ್ರವಾದ ಫಲಹಾರಿಣಿ ಕಾಳೀಪೂಜೆಯ ಶುಭದಿನ. ಮುಂದಿನ ೨-೩ ತಿಂಗಳು, ಅಂದರೆ ೨೦೦೦ದ ನವೆಂಬರ್‌ವರೆಗೆ, ಪೊನ್ನಂಪೇಟೆಯ ಆಶ್ರಮದ ಜವಾಬ್ದಾರಿಯನ್ನು ನೇಮಕ ಮಾಡಲಾದ ಅಧ್ಯಕ್ಷರಿಗೆ ವಹಿಸುವವರೆಗೆ, ಎರಡೂ ಕೇಂದ್ರಗಳ ಜವಾಬ್ದಾರಿಯನ್ನು ಸ್ವಾಮಿ ಪುರುಷೋತ್ತಮಾನಂದರೇ ವಹಿಸಿಕೊಂಡಿದ್ದರು.

ರಾಮಕೃಷ್ಣ ಮಿಷನ್‌ಗೆ ಬೆಳಗಾವಿಯಲ್ಲಿನ ಕಟ್ಟಡವನ್ನು ಕರ್ನಾಟಕ ಸರ್ಕಾರವು ವಹಿಸಿಕೊಟ್ಟಾಗ ಅದು ವಾಸಯೋಗ್ಯವಾಗಿರಲಿಲ್ಲ. ಸಂಪೂರ್ಣ ಶಿಥಿಲಗೊಂಡಿದ್ದ ಆ ಕಟ್ಟಡಕ್ಕೆ ಪೂರ್ಣ ಪ್ರಮಾಣದ ಕಾಯಕಲ್ಪ ನೀಡಿ ಅದನ್ನು ಜೀರ್ಣೋದ್ಧಾರಗೊಳಿಸುವ ಕೆಲಸ ಅತ್ಯಂತ ತುರ್ತಾಗಿತ್ತು. ಆದರೆ ಹಣದ ಕೊರತೆ ಇದ್ದುದರಿಂದ ಸಾಧುಬ್ರಹ್ಮಚಾರಿಗಳು ಅದೇ ಶಿಥಿಲಗೊಂಡ ಮನೆಯಲ್ಲಿ ನೆಲೆಸಬೇಕಾಯ್ತು. ಅದಕ್ಕೆ ಸರಿಯಾದ ಛಾವಣಿ, ಬಾಗಿಲುಗಳೂ ಇರಲಿಲ್ಲ. ಬೆಳಗಾವಿಯಲ್ಲಿ ಜೂನ್ ಮತ್ತು ಅಕ್ಟೋಬರ್‌ಗಳಲ್ಲಿ ವಿಪರೀತ ಮಳೆ. ಆರು ತಿಂಗಳ ಕಾಲ, ಅದೂ ಮಳೆಗಾಲದಲ್ಲಿ, ಅಲ್ಲಿ ವಾಸಿಸಿದರು.

ಆಗಸ್ಟ್ ೧೫, ೨೦೦೦ ದಿಂದ ಸ್ವಾಮಿ ಪುರುಷೋತ್ತಮಾನಂದರು ಬೆಳಗಾವಿಯ ನಗರದ ಎಲ್ಲೆಡೆಗಳಲ್ಲಿ ಭಜನೆ ಮತ್ತು ಉಪನ್ಯಾಸಗಳ ಕಾರ್ಯಕ್ರಮಗಳನ್ನು ಆರಂಭಿಸಿದರು. ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯದ ಬಿರುಸಿನ ಪ್ರಚಾರವೂ ಪ್ರಾರಂಭವಾಯಿತು. ನಗರದ ದೇವಸ್ಥಾನಗಳಲ್ಲಿ, ಸಭಾಂಗಣಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಬ್ರಹ್ಮಚಾರಿಗಳು ಮತ್ತು ಸ್ವಯಂಸೇವಕರು ಪುಸ್ತಕಪ್ರದರ್ಶನ ಮತ್ತು ಮಾರಾಟ ನಡೆಸಿದರು. ಒಟ್ಟಿನಲ್ಲಿ ಬೆಳಗಾವಿಯ ಜನತೆಗೆ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಪರಿಚಯ ಮಾಡಿಕೊಡುವ ಸಂಭ್ರಮದ ಅಲೆ ಎದ್ದಿತು.

ಈ ಮಧ್ಯದಲ್ಲಿ ಸ್ವಾಮೀಜಿ ತಜ್ಞರ ಸಹಾಯದಿಂದ ಕಟ್ಟಡದ ವಿನ್ಯಾಸದ ಪರೀಕ್ಷೆ ನಡೆಸಿ ಯಾವ ಭಾಗ ಮೂಲವಾದದ್ದು, ಯಾವ ಯಾವ ಭಾಗಗಳನ್ನು ಕಾಲಾಂತರದಲ್ಲಿ ಸೇರಿಸಲಾಗಿದೆ ಎಂಬ ಸಮೀಕ್ಷೆ ನಡೆಸಿದರು. ಅನಂತರ ಸ್ವಾಮಿ ವಿವೇಕಾನಂದರು ೧೮೯೨ ರಲ್ಲಿ ತಂಗಿದ್ದಾಗ ಆ ಕಟ್ಟಡ ಹೇಗಿತ್ತೋ ಹಾಗೇ ಉಳಿಸಿಕೊಂಡು ಉಳಿದ ಭಾಗಗಳನ್ನು ತೆಗೆದುಹಾಕಬೇಕೆಂದು ನಿರ್ಧರಿಸಲಾಯಿತು.

ಕಟ್ಟಡದ ಜೀರ್ಣೋದ್ಧಾರ ಕಾರ್ಯ ಪೂರೈಸಲು ೬ ತಿಂಗಳು ಬೇಕಾಯಿತು. ಟೈ-ರಾಡ್‌ಗಳ ಮೂಲಕ ಕಟ್ಟಡದ ಗೋಡೆಗಳು ಕುಸಿದುಬೀಳದಂತೆ ಬಿಗಿಗೊಳಿಸಲಾಯಿತು. ಕಟ್ಟಡದ ದುರಸ್ತಿ ನಡೆಯುವ ಸಮಯದಲ್ಲಿ ಬೆಳಗಾವಿಯ ಬಾಡಿಗೆ ಮನೆಯೊಂದರಲ್ಲಿ ಆಶ್ರಮದವರೆಲ್ಲ ವಾಸಿಸುತ್ತಿದ್ದರು. ಕಟ್ಟಡದ ನವೀಕರಣ ಮುಗಿಯುತ್ತಿದ್ದಂತೆ, ಅದರ ಉದ್ಘಾಟನೆಯನ್ನು ೨೦೦೧ ರ ಮೇ ೨೩ರಂದು ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ.ಕೃಷ್ಣ ಅವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕದ ಆಗಿನ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದ

ಶ್ರೀಧರಮ್ ಸಿಂಗ್ ಅವರು, ಕಟ್ಟಡಕ್ಕೆ ಹೊಂದಿಕೊಂಡಂತೆ ಇದ್ದ ೦.೯ ಎಕರೆ ಭೂಪ್ರದೇಶವನ್ನು ಆಶ್ರಮಕ್ಕೆ ವಹಿಸಿಕೊಟ್ಟರು. ಅಲ್ಲಿ ಸಾಧುಗಳ ವಾಸಕ್ಕೆ ಅಗತ್ಯವಿರುವ ಕಟ್ಟಡವನ್ನು ನಿರ್ಮಿಸಬೇಕೆಂಬ ಪ್ರಸ್ತಾಪವಾಯಿತು. ರಾಮಕೃಷ್ಣ ಮಹಾಸಂಘದ ಮಹಾಕಾರ್ಯದರ್ಶಿಗಳಾದ ಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಅವರು ಹೊಸ ಜಾಗದಲ್ಲಿ ಸಾಧುನಿವಾಸ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಆದರೆ ಈ ಪ್ರದೇಶವನ್ನು ಸಂಪೂರ್ಣ ಸ್ವಾಧೀನ ಪಡಿಸಿಕೊಳ್ಳಲು ಒಂದು ವರ್ಷವೇ ಬೇಕಾಯಿತು. ಸರ್ಕಾರಿ ರೀತಿ ರಿವಾಜುಗಳು ಹಾಗೂ ಕ್ರಮಗಳು ಯಾವಾಗಲೂ ವಿಳಂಬವಾದವೆ. ಸರ್ಕಾರದಲ್ಲಿನ ಕೆಲಸಗಳನ್ನು ತ್ವರೆಗೊಳಿಸಲು ಆಗಿನ ಪೊಲೀಸ್ ಮುಖ್ಯಸ್ಥರಾಗಿದ್ದ ಮತ್ತು ಬಹುದಿನಗಳಿಂದಲೂ ರಾಮಕೃಷ್ಣ ಮಿಷನ್ನಿನ ಭಕ್ತರೂ ಆದ ಶ್ರೀ ವಿ.ವಿ. ಭಾಸ್ಕರ್ ಅವರು ಬಹಳ ನೆರವಾದರು. ಏಪ್ರಿಲ್ ೨೦೦೨ ರಲ್ಲಿ ಸಾಧು ನಿವಾಸದ ಕಟ್ಟಡ ನಿರ್ಮಾಣ ಆರಂಭವಾಯಿತು. ಕರ್ನಾಟಕದ ರಾಜ್ಯಪಾಲ ಶ್ರೀ ಟಿ.ಎನ್. ಚತುರ್ವೇದಿಯವರು ಶಾರದಾ ಮಂಟಪವನ್ನೂ, ರಾಮಕೃಷ್ಣ ಮಿಷನ್‌ನ ಮಹಾಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸ್ಮರಣಾನಂದಜಿ ಅವರು ಸಾಧುನಿವಾಸ ವಿಭಾಗವನ್ನೂ ಏಪ್ರಿಲ್‌೨೦೦೩ ರಲ್ಲಿ ಉದ್ಘಾಟಿಸಿದರು.

ಹೊಸದಾಗಿ ನಿರ್ಮಿತವಾಗಿದ್ದ ಸಾಧುನಿವಾಸ ಕಟ್ಟಡದಲ್ಲಿ ಸಾಧುಗಳೂ ಬ್ರಹ್ಮಚಾರಿಗಳೂ ವಾಸಮಾಡಲು ಪ್ರಾರಂಭಿಸುತ್ತಿದ್ದಂತೆಯೇ ಆಶ್ರಮದ ಆವರಣದಲ್ಲಿ, ಈಗಾಗಲೇ ಕೈಗೊಂಡಿದ್ದ ದೇವಸ್ಥಾನದ ನಿರ್ಮಾಣಕಾರ್ಯ ಮತ್ತಷ್ಟು ಭರದಿಂದ ಸಾಗಿತು. ಹಗಲೂ ರಾತ್ರಿ ಕೆಲಸ ಮುಂದುವರಿಯಿತು. ಗಮನೀಯವಾದ ಅಂಶವೆಂದರೆ ಕಟ್ಟಡಗಳ ನಿರ್ಮಾಣದ ಒತ್ತಡಗಳ ನಡುವೆಯೂ, ಈ ಅವಧಿಯಲ್ಲೂ ಅಂದರೆ ಜೂನ್‌೨೦೦೦ ದಿಂದ ಡಿಸೆಂಬರ್ ೨೦೦೩ ರವರೆಗೆ ಆಶ್ರಮದಲ್ಲಿನ ಬ್ರಹ್ಮಚಾರಿಗಳಿಗೆ ಅಗತ್ಯವಾದ ಎಲ್ಲ ರೀತಿಯ ತರಬೇತಿಯನ್ನು ನೀಡುವುದರ ಕಡೆಯೂ ಗಮನ ಕೊಡಲಾಗುತ್ತಿತ್ತು. ಹೊಸದಾಗಿ ಬ್ರಹ್ಮಚಾರಿಗಳು ಬಂದು ಸೇರುತ್ತಲೇ ಇದ್ದರು. ೨೦೦೦ ದ ಜೂನ್‌ನಲ್ಲಿ ಆಶ್ರಮದಲ್ಲಿ ಕೇವಲ ಏಳು ಜನ ಬ್ರಹ್ಮಚಾರಿಗಳಿದ್ದರು, ಅದೇ ೨೦೦೩ರ ಡಿಸೆಂಬರ್ ವೇಳೆಗೆ ಈ ಸಂಖ್ಯೆ ೨೮ ಆಯಿತು! ಆಶ್ರಮದ ಬಹು ಮುಖಿ ಬೆಳವಣಿಗೆಯಲ್ಲಿ ಈ ಬ್ರಹ್ಮಚಾರಿಗಳ ಸೇವೆ ಶ್ಲಾಘನೀಯ.

ಆಶ್ರಮದ ಆವರಣದಲ್ಲಿ ಅಕ್ಟೋಬರ್ ೨೦೦೩ರ ಹೊತ್ತಿಗೆ ದೇವಸ್ಥಾನದ ನಿರ್ಮಾಣಕಾರ್ಯ ಸಂಪೂರ್ಣಗೊಂಡಿತು. ದೇವಸ್ಥಾನದ ನಿರ್ಮಾಣ ಸಂಪೂರ್ಣಗೊಂಡಂತೆ ಅದರ ಉದ್ಘಾಟನಾ ದಿನಾಂಕವನ್ನು ಸ್ವಾಮಿ ಬ್ರಹ್ಮಾನಂದಜಿಯವರ ಪುಣ್ಯ ಜನ್ಮದಿನವಾದ ೨೦೦೪, ಜನವರಿ ೨೩ ಎಂದು ನಿಗದಿಪಡಿಸಲಾಯಿತು. ಅತ್ಯಂತ ಗಮನಾರ್ಹವಾದ ವಿಷಯವೆಂದರೆ, ಈ ಎಲ್ಲ ಬಗೆಯ ನಿರ್ಮಾಣ ಕಾರ್ಯಗಳಿಗೆ ರಾಷ್ಟ್ರಾದ್ಯಂತ ಸಹಸ್ರಾರು ಭಕ್ತರಿಂದ ಮತ್ತು ಅಭಿಮಾನಿಗಳಿಂದ ಧನಸಹಾಯ ಒದಗಿ ಬಂದದ್ದು. ಈ ಧನಸಂಗ್ರಹಣೆ ಕಾರ್ಯವು ಸ್ವಾಮಿ ವಿವೇಕಾನಂದರು ಬಯಸಿದ್ದಂತೆ, ಸಹಸ್ರಾರು ಜನರ ಸ್ವಲ್ಪ ಸ್ವಲ್ಪ ಕಾಣಿಕೆಯಿಂದ ನಡೆದದ್ದು. ನಮ್ಮ ದೇಶದಲ್ಲಿ ಅಪಾರ ಶ್ರೀಮಂತರು ಬಹು ದೊಡ್ಡ ಮೊತ್ತವನ್ನು ದಾನಮಾಡಲು ಮುಂದೆ ಬರುವುದು ದೊಡ್ಡ ವಿಷಯವೇನಲ್ಲ. ಆದರೆ ಮಹತ್ಕಾರ್ಯವೊಂದರಲ್ಲಿ ಅತ್ಯಂತ ಸಾಮಾನ್ಯನೂ ಪಾಲ್ಗೊಂಡು ತನ್ನನ್ನು ಒಂದು ಮಹೋದ್ದೇಶದೊಡನೆ ಗುರುತಿಸಿಕೊಳ್ಳಬೇಕೆಂದು ಸ್ವಾಮಿ ವಿವೇಕಾನಂದರು ಬಯಸಿದ್ದರು. ಈ ಭಾವನೆಯ ಅರಿವಾದದ್ದು ದೇವಸ್ಥಾನದ ಉದ್ಘಾಟನೆಯ ಸಮಯದಲ್ಲಿ. ಈ ದೇವಸ್ಥಾನಕ್ಕೆ ಅಲ್ಪ ಕಾಣಿಕೆ ನೀಡಿದ್ದರೂ, ದೇಗುಲದೊಂದಿಗೆ ಸ್ಥಾಪಿತವಾದ ಈ ಭಾವಸಂಬಂಧದಿಂದ ಸೆಳೆಯಲ್ಪಟ್ಟವರಾಗಿ, ಭಾರತದ ಎಲ್ಲ ಭಾಗಗಳಿಂದ ಅಧಿಕ ಸಂಖ್ಯೆಯಲ್ಲಿ ಜನರು ದೇವಸ್ಥಾನದ ಉದ್ಘಾಟನೆಗೆ ಆಗಮಿಸಿದ್ದರು.

ಬೆಳಗಾವಿಯ ಇತಿಹಾಸಲ್ಲೇ ಒಂದು ಮಹತ್ವಪೂರ್ಣವಾದ ಈ ಉದ್ಘಾಟನಾ ಸಮಾರಂಭ ೨೦೦೪, ಜನವರಿ ೨೧ರಿಂದ ೨೫ ರವರೆಗೆ ನಡೆಯಿತು. ಶ್ರೀರಾಮಕೃಷ್ಣ ಮಹಾಸಂಘದ ಹಿರಿಯ-ಕಿರಿಯ ಸಾಧುಗಳು, ಖಾಸಗಿ ಆಶ್ರಮಗಳ ಸಾಧುಗಳು, ದೇಶದಾದ್ಯಂತದಿಂದ ಬಂದಿದ್ದ ಭಕ್ತರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಆಶ್ರಮದ ಆವರಣಕ್ಕೆ ಹೊಂದಿಕೊಂಡಿದ್ದ ವಿದ್ಯಾಸಂಸ್ಥೆಯ ವಿಶಾಲ ಮೈದಾನದಲ್ಲಿ ದೊಡ್ಡ ಸಭಾಂಗಣ ನಿರ್ಮಾಣವಾಗಿತ್ತು. ಅದಕ್ಕಿಂತ ಸ್ವಲ್ಪ ದೂರದಲ್ಲಿ ಪಾಕಶಾಲೆ, ಭೋಜನಶಾಲೆಗಳು ರಚಿತವಾಗಿದ್ದವು. ಸಭಾಂಗಣದ ಎದುರಿಗೆ ಸ್ವಾಗತ ವಿಭಾಗ, ಕಾಫಿ ಮಳಿಗೆ, ಪುಸ್ತಕ ಪ್ರಸಾರ ಮತ್ತು ವಿವೇಕಪ್ರಭದ ಮಳಿಗೆಗಳಿದ್ದವು. ಸಭಾಂಗಣದ ಬಲಭಾಗದಲ್ಲಿ ಮತ್ತೊಂದು ದೊಡ್ಡ ಪುಸ್ತಕ ಮಳಿಗೆ ಇತ್ತು. ವಿಶಾಲವಾದ ಸಭಾಂಗಣದಲ್ಲಿ ಆಕರ್ಷಕವಾದ ವೇದಿಕೆ. ವೇದಿಕೆಯ ಹಿನ್ನೆಲೆಯಲ್ಲಿ, ಮಧ್ಯಭಾಗದಲ್ಲಿ ದಿವ್ಯತ್ರಯರ ಭಾವಚಿತ್ರಗಳು. ಸಭಾಂಗಣ ಆರು ಸಾವಿರ ಕುರ್ಚಿಗಳನ್ನು ಹೊಂದಿಸುವಷ್ಟು ದೊಡ್ಡದಾಗಿತ್ತು. ಸಮಾರಂಭ ಸುಗಮವಾಗಿ ನಡೆದು, ಐದು ದಿನಗಳ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಸಮಾರಂಭದಲ್ಲಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದ ಜನಸ್ತೋಮವು ರಾಮಕೃಷ್ಣ ಆಂದೋಲನವು ಈ ಪ್ರಾಂತವನ್ನು ಓತಪ್ರೋತವಾಗಿ ವ್ಯಾಪಿಸುವ ದಿನಗಳು ದೂರವಿಲ್ಲ ಎಂಬುದನ್ನು ಸಾರಿ ಹೇಳುವಂತಿತ್ತು.

ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮ ಇಂದು ಅಲ್ಲಿನ ಜನತೆಯ ಸಾಂಸ್ಕೃತಿಕ ಬದುಕಿಗೆ ಹೊಸ ಆಯಾಮವನ್ನು ನೀಡುವುದರಲ್ಲಿ ಯಶಸ್ವಿಯಾಗಿದೆ. ಆಶ್ರಮ ಹಮ್ಮಿಕೊಂಡಿರುವ ಹಲವಾರು ಕಾರ್ಯಕ್ರಮಗಳು, ವಿಶೇಷವಾಗಿ ವಿದ್ಯಾರ್ಥಿಗಳಿಗೆ ಹಾಗೂ ಯುವಸಮುದಾಯಕ್ಕೆ ಸಲ್ಲಿಸುತ್ತಿರುವ ಸೇವೆ, ಆಶ್ರಮವು ಪ್ರಗತಿಪಥದಲ್ಲಿರುವುದಕ್ಕೆ ಹೆಗ್ಗುರುತಾಗಿವೆ. ಇಷ್ಟೊಂದು ಅಲ್ಪ ಕಾಲದಲ್ಲಿ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮ ಬಹಳ ಭದ್ರ ಬುನಾದಿ ಹೊಂದಿ ದೃಢವಾಗಿ ನಿಂತಿರುವುದು ಶ್ರೀರಾಮಕೃಷ್ಣರ ಮಹಾಶಕ್ತಿಗೆ ಸಾಕ್ಷಿಯಾಗಿದೆ! ◢